ಇಲಾಖೆ / ವಿಷಯ: DEPARTMENT / SUBJECT: ಕಂದಾಯ

ಪತ್ರಿಕೆಯ ಹೆಸರು : NAME OF THE NEWS PAPER : ಉದಯವಾಣಿ ದಿನಾಂಕ : DATE : 11/10/2019

# ದಾಖಲೆ ಇಲ್ಲದಿದ್ರೂ ಪರಿಹಾರ

## ಕಂದಾಯ ಸಚಿವ ಆರ್. ಅಶೋಕ್ ಭರವಸೆ

**ವಿಧಾನ ಪರಿಷತ್:** ರಾಜ್ಯದಲ್ಲಿ ನೆರೆ ಹಾವಳಿಗೆ ತುತ್ತಾದ ಪ್ರತಿ ಮನೆಗೂ ಸರ್ಕಾರ ಸೂಕ್ತ ಪರಿಹಾರ ನೀಡಲಿದೆ ಎಂದು ಕಂದಾಯ ಸಚಿವ ಆರ್. ಅಶೋಕ್ ಪ್ರಕಟಿಸಿದ್ದಾರೆ.

ಗುರುವಾರ ಆರಂಭಗೊಂಡ ಮೂರು ದಿನಗಳ ಅಧಿವೇಶನ ಸಂಬಂಧ ವಿಧಾನ ಪರಿಷತ್ತಿನಲ್ಲಿ ನಿಯಮ 68ರ ಅಡಿ ನೆರೆ ಹಾವಳಿ ಕುರಿತು ಕೈಗೆತ್ತಿಕೊಂಡ ಚರ್ಚೆಯಲ್ಲಿ ಈ ವಿಷಯ ತಿಳಿಸಿದ ಸಚಿವರು, ನೆರೆ ಹಾವಳಿಗೆ ಹಾನಿಗೊಳಗಾದ ಮನೆ ಅನಧಿಕೃತವಾಗಿರಲಿ ಹಾಗೂ ಆ ಮನೆಗೆ ಸಂಬಂಧಿಸಿದ ದಾಖಲೆ ಇಲ್ಲದಿರಲಿ, ಬೀದಿಗೆ ಬಂದ ಆ ಕುಟುಂಬಕ್ಕೆ ಪರಿಹಾರ ನೀಡಲಾಗುವುದು ಎಂದರು. ಮನೆಯು ಶೇ. 25ಕ್ಕಿಂತ ಹೆಚ್ಚು ಹಾನಿಗೊಳಗಾಗಿದ್ದರೆ 5 ಲಕ್ಷ ರೂ. ಮತ್ತು ಮನೆಗೆ ನೀರು ನುಗ್ಗಿದ್ದರೆ 10 ಸಾವಿರ ರೂ. ಪರಿಹಾರ ಒದಗಿಸಲಾಗುವುದು ಹೇಳಿದರು. ಅಷ್ಟೇ ಅಲ್ಲ, ಹಿಂದೆ ಇದ್ದ ಎ, ಬಿ ಮತ್ತು ಸಿ ಎಂಬ ವಿಂಗಡಣೆ ರೂಪದ ನೆರೆ ಪರಿಹಾರ ನಿಯಮವನ್ನೂ ಪರಿಷ್ಕರಣೆ ಮಾಡಲಾಗಿದೆ ಎಂದು ಅಶೋಕ್ ತಿಳಿಸಿದರು.

**ಹಿಂದೆ ಇದ್ದ ನಿಯಮ**

**1** ಲಕ್ಷ ರೂ.- ಶೇ. 25ರಿಂದ 75ರವರೆಗೆ ಮನೆ ಜಖಂ

**5** ಲಕ್ಷ ರೂ.- ಶೇ. 75ಕ್ಕಿಂತ ಹೆಚ್ಚು ಹಾನಿಯಾಗಿದ್ದರೆ

**25** ಸಾವಿರ ರೂ.- ಶೇ. 25ಕ್ಕಿಂತ ಕಡಿಮೆ ಹಾನಿಯಾಗಿದ್ದರೆ

**ಪರಿಷ್ಕೃತ ನಿಯಮ**

**5** ಲಕ್ಷ ರೂ.- ಶೇ. 25ಕ್ಕಿಂತ ಹೆಚ್ಚು ಮನೆ ಹಾನಿಗೊಳಗಾದರೆ

**50** ಸಾವಿರ ರೂ.- ಶೇ. 25ಕ್ಕಿಂತ ಕಡಿಮೆ ಹಾನಿಯಾಗಿದ್ದರೆ

**ಅಧಿವೇಶನ ವಿಸ್ತರಣೆಗೆ ಒಪ್ಪದ ಸರ್ಕಾರ:** ಭೀಕರ ನೆರೆ ಪರಿಸ್ಥಿತಿ ತಲೆದೋರಿದ್ದು ಈ ಬಗ್ಗೆ ಚರ್ಚೆ ಮಾಡಲು 10 ದಿನಗಳಾದರೂ ಅಧಿವೇಶನ ನಡೆಸಬೇಕು ಎಂಬ ಪ್ರತಿಪಕ್ಷಗಳ ಬೇಡಿಕೆಯನ್ನು ಸರ್ಕಾರ ನಿರಾಕರಿಸಿದೆ.

8